ಪತ್ರಿಕಾ ತುಣುಕುಗಳು
PAPER CLIPPINGS

ಶಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ

ದಿನಾಂಕ : DATE: 11/11/20

# ವಿಧಾನ ಪರಿಷತ್‌ನಲ್ಲೂ ಬಿಜೆಪಿ ಪಾರಮ್ಯ

## ಸಂಕನೂರ, ಪುಟ್ಟಣ್ಣ ಪುನರಾಯ್ಕೆ | ಕಾಂಗ್ರೆಸ್‌ನ ಮಟ್ಟೂರ್ ಮಣಿಸಿದ ನಮೋಶಿ | ಆಗ್ನೇಯ ಫಲಿತಾಂಶ ಅಸ್ಪಷ್ಟ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು 11-11-20

ವಿಧಾನಸಭೆ ಉಪಚುನಾವಣೆ ಜತೆಗೆ ವಿಧಾನ ಪರಿಷತ್‌ಗೆ ನಡೆದಿದ್ದ ಚುನಾವಣೆಗಳಲ್ಲೂ ಬಿಜೆಪಿ ಪಾರಮ್ಯ ಮೆರೆದಿದ್ದು, ನಾಲ್ಕು ಕ್ಷೇತ್ರಗಳಲ್ಲಿ ಈಗಾಗಲೆ ಮೂರರಲ್ಲಿ ದಿಗ್ವಿಜಯ ಸಾಧಿಸಿದೆ. ವಿಧಾನ ಪರಿಷತ್ ಪಶ್ಚಿಮ ಪದವೀಧರ ಕ್ಷೇತ್ರದಲ್ಲಿ ಬಿಜೆಪಿ ಸಲೀಸಾಗಿ ಹ್ಯಾಟ್ರಿಕ್ ಗೆಲುವು ದಾಖಲಿಸಿದೆ. ನಿಕಟಪೂರ್ವ ಎಂಎಲ್‌ಸಿ ಪ್ರೊ. ಎಸ್.ವಿ. ಸಂಕನೂರ ಅವರು ಪುನರಾಯ್ಕೆಗೊಂಡಿದ್ದಾರೆ.



ನಾಟಕೀಯ ಬೆಳವಣಿಗೆಯಲ್ಲಿ ಜೆಡಿಎಸ್ ಬೆಂಬಲವನ್ನೂ ಪಡೆದು, ಆ ಪಕ್ಷದ ಅಧಿಕೃತ ಅಭ್ಯರ್ಥಿ ಕಣದಿಂದ ನಿವೃತ್ತಿ ಘೋಷಿಸುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದ ಪಕ್ಷೇತರ ಅಭ್ಯರ್ಥಿ ರಾಷ್ಟ್ರೀಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಉಪಾಧ್ಯಕ್ಷ ಬಸವರಾಜ ಗುರಿಕಾರಗೆ 6,188 ಮತಗಳು ಮಾತ್ರ ಪ್ರಾಪ್ತವಾಗಿವೆ. ಧಾರವಾಡ, ಉತ್ತರ ಕನ್ನಡ, ಹಾವೇರಿ, ಗದಗ ಜಿಲ್ಲೆಗಳನ್ನು ಒಳಗೊಂಡ ಈ ಕ್ಷೇತ್ರಕ್ಕೆ ಅ. 28ರಂದು ಚುನಾವಣೆ ನಡೆದಿತ್ತು. ಮಂಗಳವಾರ ಬೆಳಗ್ಗೆಯಿಂದ ಧಾರವಾಡದ ಕೃಷಿ ವಿವಿ ಆವರಣದಲ್ಲಿ ಮತ ಎಣಿಕೆ ನಡೆಯಿತು.

### ಅಭ್ಯರ್ಥಿಗಳು ಪಡೆದ ಮತ ವಿವರ

| | |
|---|---|
| ಪ್ರೊ. ಸಂಕನೂರ (ಬಿಜೆಪಿ) | 23,857 |
| ಕುಬೇರಪ್ಪ (ಕಾಂಗ್ರೆಸ್) | 12,448 |
| ಬಸವರಾಜ ಗುರಿಕಾರ (ಪಕ್ಷೇತರ) | 6,188 |
| ಚಲಾವಣೆಯಾದ ಮತ | 52,041 |
| ತಿರಸ್ಕೃತಗೊಂಡ ಮತ | 8772 |

### ಪರಿಷತ್‌ನಲ್ಲಿ ಬಲಾಬಲ

ಬಿಜೆಪಿ 30, ಕಾಂಗ್ರೆಸ್ 28, ಜೆಡಿಎಸ್ 14, ಸಭಾಪತಿ 1, ಪಕ್ಷೇತರ 1, ಫಲಿತಾಂಶ ನಿರೀಕ್ಷೆ 1, ಒಟ್ಟು 75

### ಪಕ್ಷೇತರ ಮುನ್ನಡೆ

ಆಗ್ನೇಯ ಪದವೀಧರ ಕ್ಷೇತ್ರದಲ್ಲಿ ಬಂಡಲ್ ಕಟ್ಟುವ ಕಾರ್ಯ ವಿಳಂಬವಾದ್ದರಿಂದ ಮತ ಎಣಿಕೆ ತಡವಾಗಿ ಆರಂಭಗೊಂಡಿತು. 2ನೇ ಸುತ್ತಿನ ಮತ ಎಣಿಕೆಯಲ್ಲಿ ಪಕ್ಷೇತರ ಅಭ್ಯರ್ಥಿ ಡಿ.ಟಿ.ಶ್ರೀನಿವಾಸ್ 7798 ಮತ ಪಡೆದು ಮುನ್ನಡೆಯಲ್ಲಿದ್ದು, ಬಿಜೆಪಿಯ ಚಿದಾನಂದ ಎಂ.ಗೌಡ (7202), ಜೆಡಿಎಸ್‌ನ ಚೌಡರೆಡ್ಡಿ (5374), ಕಾಂಗ್ರೆಸ್‌ನ ರಮೇಶ್ ಬಾಬು (2949) ನಂತರದ ಸ್ಥಾನದಲ್ಲಿದ್ದರು.

### ಪುಟ್ಟಣ್ಣ 4ನೇ ಬಾರಿ ಜಯಭೇರಿ



ಬೆಂಗಳೂರು ಶಿಕ್ಷಕರ ಕ್ಷೇತ್ರದಲ್ಲಿ ಜೆಡಿಎಸ್ ಬಿಟ್ಟು ಬಿಜೆಪಿ ಸೇರಿದ್ದ ಪುಟ್ಟಣ್ಣ ನಾಲ್ಕನೇ ಬಾರಿ ಜಯಭೇರಿ ಬಾರಿಸಿದ್ದಾರೆ. 3 ಬಾರಿ ಜೆಡಿಎಸ್‌ನಿಂದ ಗೆದ್ದಿದ್ದ ಪುಟ್ಟಣ್ಣ ಈ ಬಾರಿ ಬಿಜೆಪಿಗೆ ಜಿಗಿದು ವಿಜಯ ದುಂದುಭಿ ಮೊಳಗಿಸಿದ್ದಾರೆ. ಮೂರು ಬಾರಿ ಜೆಡಿಎಸ್‌ನಿಂದ ಗೆದ್ದರೂ ಆ ಮತಗಳನ್ನು ಬಿಜೆಪಿಗೆ ಪರಿವರ್ತನೆ ಮಾಡಿಕೊಳ್ಳುವ ತಂತ್ರಗಾರಿಕೆಯಲ್ಲಿ ಪುಟ್ಟಣ್ಣ ಯಶಸ್ವಿಯಾಗಿದ್ದಾರೆ. ಹಾಗೆಂದ ಮಾತ್ರಕ್ಕೆ ಜೆಡಿಎಸ್ ಇಲ್ಲಿ ಕಳಪೆ ಪ್ರದರ್ಶನವೇನೂ ನೀಡಿಲ್ಲ. ಈ ಕ್ಷೇತ್ರದಲ್ಲಿ ತನ್ನ ಸಾಮರ್ಥ್ಯ ಇನ್ನೂ ಬಲವಾಗಿದೆ ಎಂಬುದನ್ನು ಸಾಬೀತುಪಡಿಸಿದೆ.

### ಅಭ್ಯರ್ಥಿಗಳು ಪಡೆದ ಮತ

| | |
|---|---|
| ಪುಟ್ಟಣ್ಣ(ಬಿಜೆಪಿ) | 7335 |
| ಎ.ಪಿ.ರಂಗನಾಥ್ (ಜೆಡಿಎಸ್) | 5107 |
| ಪ್ರವೀಣ್ ಪೀಟರ್ (ಕಾಂಗ್ರೆಸ್) | 782 |
| ಚಲಾವಣೆಯಾದ ಮತ | 14,538 |
| ತಿರಸ್ಕೃತಗೊಂಡ ಮತ | 1251 |

### ನಮೋಶಿಗೆ ಭರ್ಜರಿ ಜಯ

| | |
|---|---|
| ಶಶೀಲ್ ನಮೋಶಿ (ಬಿಜೆಪಿ) | 10210 |
| ಮಟ್ಟೂರ್ (ಕಾಂಗ್ರೆಸ್) | 7072 |
| ತಿಮ್ಮಯ್ಯ ಪುರ್ಲೆ (ಜೆಡಿಎಸ್) | 3812 |
| ಚಲಾವಣೆಯಾದ ಮತ | 21437 |
| ತಿರಸ್ಕೃತಗೊಂಡ ಮತ | 844 |



ಕಲಬುರಗಿ: ಈಶಾನ್ಯ ಶಿಕ್ಷಕರ ಕ್ಷೇತ್ರವನ್ನು ವಶಪಡಿಸಿಕೊಳ್ಳುವಲ್ಲಿ ಬಿಜೆಪಿ ಯಶಸ್ವಿಯಾಗಿದೆ. ಪಕ್ಷದ ಅಭ್ಯರ್ಥಿ ಶಶೀಲ್ ಜಿ.ನಮೋಶಿ ಸಮೀಪದ ಪ್ರತಿಸ್ಪರ್ಧಿ ಕಾಂಗ್ರೆಸ್‌ನ ಹಾಲಿ ಸದಸ್ಯ ಶರಣಪ್ಪ ಮಟ್ಟೂರ್ ಅವರನ್ನು ಸೋಲಿಸಿ 4ನೇ ಬಾರಿ ವಿಧಾನ ಪರಿಷತ್ ಪ್ರವೇಶಿಸಿದರು. ಕ್ಷೇತ್ರದ ಬೀದರ್, ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳ ಮತದಾರ ಶಿಕ್ಷಕರು ತಮ್ಮ ಹಕ್ಕನ್ನು ಚಲಾಯಿಸಿದ್ದರು.